ತಾಲ್ಲೂಕು.	ಹೋಬ್ಳಿ.	ಗ್ರಾಮ.	ಖಾತೇದಾರನ ಹೆಸರು.	ಸ್ವತ್ತಿನ ತಫ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನೆಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಮುಟ್ಟಿಸೀ ತರೀ ಆಥವಾ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಆಕಾರ.	ಸರಕಾರಕ್ಕೆ ಸಲ್ಲತಕ್ಕ ಸಕ್ತಿಯ ಜೊತೆಗೆ ಸಲ್ಲತಕ್ಕವಾದ ಬಾಕೀ ಮೊಲಲುಗಳು.
1	2	3	4	5	6	7	8	9	10	11
					ರೂ.ಆ.ಪೈ.			ಎ. ಗು.	ರೂ. ಆ.ಪೈ.	ರೂ. ಆ. ಪೈ.
ತುಮಕೂರು.	ನರಸಾಪುರ.	ಮುತ್ತಕದಹಳ್ಳಿ ಹೋಬಿ ಗ್ರಾಮ.	ನರಸಿಂಗರಾವ್.	..	0	ಫೂರಾ ಗ್ರಾಮ	ಖುಷ್ಕೀ ತರೀ ಬಾಗಾಯಿತು ಟೋಟಲ್. ಸಾಲಿಯಾನಾ ಸರ್ಕಾರಕ್ಕೆ ಬರಬೇಕಾದ್ದು	145 71 20 92 1 23 167 86	195 13 7 135 2 0	135 2 0

ಬಿ. ಜಿ. ಕೃಷ್ಣಯ್ಯಂಗಾರ್,
ಡಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟು.

1896ನೇ ಇಸವಿ ಮೇ ತಾರೀಖು ರಲ್ಲಾ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಮತ್ತು ಮದ್ದಗಿರಿ ಡಿಪೋದಲ್ಲಿರುವ ಈ ಕೆಳಗೆ ಸಮೂಹದಾಗುವ ಸಾಮಾನುಗಳನ್ನು 1896ನೇ ಇಸವಿ ಜೂ 15ರಲ್ಲಿ ತುಮಕೂರು ಡಿಪೋದಲ್ಲಿಯೂ 19ರಲ್ಲಿ ಮದ್ದಗಿರಿ ಡಿಪೋದಲ್ಲೂ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.

ತುಮಕೂರು ಡಿಪೋ.

ತರಹೆ.	ಸಂಖೆ.	ಸಲೆ. ಆಡಿ.	ಅಂಗುಲ.	ಸಪ್ಪನ.	ಪರಾ.
ಕ್ಯಾಗ	226	159	5	..	ಹೆಚ್ಚು ಕಡಮೆ.
ಅಳಲೇಕಾಯಿ	32 ಮಣ	...	...	...	ಡಿಟೋ

ಮದ್ದಗಿರಿ ಡಿಪೋ.

ಕ್ಯಾಗ	365	320	3	3	ಡಿಟೋ
ಹುಲವೆ	1	..	8	0	

ಹರಾಜು ಮೊಲಲುಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಷರತ್ತುಗಳು.—ಹರಾಜು ಖೈದಾದ ಕೂಡ್ಲೆ ಕಾಲುಹಿಸ್ಸೆ ಮೊಲಲುಗು ಕೇವಣಿ ತರ್ಕ ಹಾಜರ್ಮಾಡಬೇಕು. ಬಾಕಿ ಮೊಲಲುಗನ್ನ

ಹರಾಜು ತಾರೀಖು ಲಾಗಾಯತು 1 ವಾರದ ಒಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ಮುಸರೆ ಹರಾಜು ಮಾಡಲ್ಪಡುವದಲ್ಲದೆ ಲುಕ್‌ಸಾನಿಗೆ ಬೊದಲು ಹರಾಜುದಾರನ್ನು ಗುರಿಮಾಡಲ್ಪಡುತ್ತೆ. ಸಾಮಾನುಗಳನ್ನೆಲ್ಲಾ ಹರಾಜು ತಾರೀಖು ಲಾಗಾಯತು 10 ದಿವಸದ ಒಳಗಾಗಿ ಸಾಗಿಸಿಕೊಳ್ಳಬೇಕು. ಇತರ ತಪ್ಸೀಲಿಗೆ 1895ನೇ ಇಸವಿ ಏಪ್ರಲ್ 25ನೇ ಮತ್ತುಂ ಮೈಸೂರ ಗೆಜೆಟ್ 1ನೇ ಭಾಗದಲ್ಲಿ ಪ್ರಕಟಿಸಿರುವ 1895ನೇ ಇಸವಿ ಮಾರ್ಚಿ 15ನೇ ಮತ್ತುಂ 15229ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ ನೋಡಿ.

ನೋಟಿಫಿಕೇಷನ್.

1896ನೇ ಇಸವಿ ಮೇ ತಾಹ 24ನೇ ತಾರೀಖು.

ಮೈಸೂರು ದೇಶದ ಫಾರೆಸ್ಟ್ ಇಲಾಖಾ ಕನ್‌ಸರ್‌ವೇಟರ್ ಸಾಹೆಬರವರ 1896ನೇ ಇಸವಿ ಮೇ ತಾಹ 16ನೇ ತಾರೀಖಿನ 3845—153ನೇ ನಂಬರ್ ಡಾಕಿಟ್ ಅನುಸಾರವು ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮದ್ದಗಿರಿ ತಾಲ್ಲೂಕಿನಲ್ಲಿರುವ ಈ ಕೆಳಗೆ ನಮೂದು ಆಗಿರುವ ಡಿಸ್ಪ್ಯಾಕ್ಟು ಜಂಗಲ್‌ಗಳು ಇನ್ನೊಂದು ಹುಕುಂ ಕೊಡುವ ಪರಯಂತ್ರ ನಾವೆ, ಮರ ಮುಟ್ಟು ಮುಂತಾದ ಸಾಮಾನುಗಳನ್ನ ಇವುಗಳಲ್ಲಿ ಯಾರೊಬ್ಬರೂ ಕಡಿಯಬಹುದು ಎಂದು ಮಾಡಲ್ಪಟ್ಟಿವೆ.

ಡಿಸ್ಪ್ಯಾಕ್ಟು ಜಂಗಲ್ ಇರುವ ಹೋಬಳಿ ಹೆಸರು.	ಡಿಸ್ಪ್ಯಾಕ್ಟು ಜಂಗಲ್ ಹೆಸರು.
ಮದ್ದಗಿರಿ.	(1) ಕಿಬ್ಬಹಳ್ಳಿ
	(2) ಸಿಗ್ಗಿಕಟ್ಟೆ
	(3) ಪನಗೊಂಡಕಟ್ಟೆ
	(4) ಹೊನಹಳ್ಳಿ
	(5) ತಾಯಿಗೊಂಡನಹಳ್ಳಿ
	(6) ಗುರಮ್ಮನಹಳ್ಳಿ
	(7) ಚಿನಕವಜ್ಜ

ಎಂ. ವೆಂಕಟನಾರಣಪ್ಪ,
ಡಿ ಫಾರೆಸ್ಟ್ ಆಫೀಸರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 26ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ ೧೮೯೬—97ನೇ ಸಾಲಿಗೆ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ಕಾರಂಗದ ಕಲ್ಲು ಜಮಾಯಿಸಬಕ್ಕ ಹಕ್ಕನ್ನ ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಯಲ್ಲಿ ಏರುವ ಜುಲೈ 14ನೇ ತಾರೀಖಿನ ಬೆಳ್ಗೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್‌ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುತ್ತಾರೆ.

3. ಜಡಸವಾಲ್ ಅಂಗೀಕರಿಸಬಕ್ಕದ್ದು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಬಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡಬಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜ್ಯಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಜಡಸವಾಲ್‌ದಾರ್ರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿ ವೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡಬೇಕಲ್ಲದೆ ಹರಾಜ್ ಮಂಜೂರ್ ಮಾಡಲ್ಪಟ್ಟ ಸಂಗತಿ ಡೆಪ್ಯುಟಿ ಅಮಲ್‌ದಾರ್ರಿಂದ ಜಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಜಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ವೇಖೀಲ್ ಜಡಸವಾಲ್ ಮೊಬಲಗನ್ನ ಪಾವತಿ ಮಾಡಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೇದಾರ್ರು ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಕಾರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರ್ರು ತಮ್ಮ ಜಮೀನುಗಳಲ್ಲಿರತಕ್ಕ ಕಾರಂಗದ ಕಲ್ಲುಗಳನ್ನ ತಾವೆ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರ್ರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರ್ರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಕಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕಾರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರ್ರು ಆಗಿಯಾಕೂಡದು. ಬಂದು ವೇಳೆ ಆಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಪ್ಪತ್ತು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲಿಗೆ ಖಾನಮೂದು ಕಂಡು ಸಬ್ ತಾಲ್ಲೂಕು ಡೆಪ್ಯುಟಿ ಅಮಲ್‌ದಾರ್ರಿಂದ ಬಂದು ವಾಷೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೇದಾರ್ರು ಸಾಗಿಸಕೂಡದು.

ಎ. ಕೃಷ್ಣಸ್ವಾಮ್ಯಯ್ಯಂಗಾರ್ರು,
ಡೆಪ್ಯುಟಿ ಕಮ್ಮಿನರ್.